

# ಕಿಡ್ನಿಕಲ್ಲು ನಿವಾರಣೆ ಹೇಗೆ?



**ಮೂತ್ರಕೋಶದಲ್ಲಿ ಕಲ್ಲುಗಳಾಗುವುದು ಈಗೀಗ ಸಾಮಾನ್ಯ ಸಮಸ್ಯೆಯಾಗಿ ಬಿಟ್ಟಿದೆ. ಕಿಡ್ನಿ ಸಮೀಪದ ಪಕ್ಕೆಗಳಲ್ಲಿ ನೋವು ಬರುವುದು, ಮೂತ್ರ ವಿಸರ್ಜನೆಗೆ ಅಡಚಣೆಯಾಗುವುದು ಮೂತ್ರಕೋಶದಲ್ಲಿ ಕಲ್ಲುಗಳುಂಟಾದಾಗಲೇ. ಸೂಕ್ತ ಚಿಕಿತ್ಸೆಯಿಂದ ಪರಿಹಾರ ಕಂಡುಕೊಳ್ಳಬೇಕು.**

**ಉಮಾ ಅನಂತ್**

ಇಪ್ಪತ್ತರ ಹರೆಯದ ವಿನುತಾಳಿಗೆ ದಿನಾ ಬೆಳಿಗ್ಗೆ ಎದ್ದ ಹಾಗೆ ಕಿಬ್ಬೊಟ್ಟೆಯಲ್ಲಿ ವಿಪರೀತ ನೋವು. ಕೆಲದಿನಗಳ ಬಳಿಕ ಸಂಜೆಯೂ ನೋವು ಆಗಲು ಶುರುವಿಟ್ಟಿತು. ಜೊತೆಗೆ ಮೂತ್ರ ಮಾಡಲು ಕಷ್ಟಪಡಬೇಕಾದ ಪರಿಸ್ಥಿತಿ. ವೈದ್ಯರ ಬಳಿ ತಪಾಸಣೆ ಮಾಡಿಸಿದಾಗ ಇದು ಮೂತ್ರಕೋಶದಲ್ಲಿ ಕಲ್ಲು ಆಗಿರಬಹುದು ಎಂದು ಸಂಶಯಪಟ್ಟರು. ಜೊತೆಗೆ ಸ್ಕ್ಯಾನಿಂಗ್ ಮಾಡಿಸಲು ಸಲಹೆ ಕೊಟ್ಟರು. ಅದರಂತೆ ವಿನುತಾ ಸ್ಕ್ಯಾನಿಂಗ್ ಮಾಡಿಸಿದಾಗ ಆಕೆಯ ಮೂತ್ರಕೋಶದಲ್ಲಿ ಕಲ್ಲುಗಳಿರುವುದು ದೃಢಪಟ್ಟಿತು. ಸೂಕ್ತ ಚಿಕಿತ್ಸೆ ಪಡೆದ ವಿನುತಾ ಬೇಗನೆ ಚೇತರಿಸಿಕೊಂಡಳು.

ಜೀವನಶೈಲಿ ಕಾಯಿಲೆಗಳ ಜೊತೆಗೆ ಇಂದು ಕಿಡ್ನಿಕಲ್ಲು, ಮಹಿಳೆಯರಲ್ಲಿ ಗರ್ಭಕೋಶದಲ್ಲಿ ನಾರುಗಡ್ಡೆ